

ಎಐ ಚಿತ್ರ: ಈಶ್ವರ್

ತಡೆಯಲಾಗದೆ ಗಂಡಸ್ರು ಮೋಟು ಬೀಡಿಯನ್ನು ಉಸ್ ಉಸ್ ಎಂದು ಎರಡು ಧಮ್ ಹೊಡೆದು ಹಟ್ಟಿ ಕಡೆಗೆ ನಡೆದರು. ಕಂಪನದ ಅಲ್ಲೋಲಕಲ್ಲೋಲ ನಡೆದು ಮೂರು ದಿನಕ್ಕೋ ವಾರಕ್ಕೋ ಕೆಜಿಎಫ್ ಮಾರಿಕುಪ್ಪಂನ ಮುನಿಯಮ್ಮಾಳ್ ಅಲಿಯಾಸ್ ಮುನಿಯಮ್ಮ ಒಣಮೀನು ಮಾರೋಕೆ ಬಂದಳು. ದೊಡ್ಡದಾದ ಗಂಪ (ಬುಟ್ಟಿ) ಹೊತ್ತ ಆಕೆಯ 'ವಾಡಿಶಾಪಲೂ, ಕರಿಮೀನೋ' ಎಂಬ ತಮಿಳ್ ತೆಲುಗು ಸ್ಲಾಂಗ್‌ನ ಕೂಗು ಕೇಳೋಕೆ ಬಲು ಚಂದವಿರುತ್ತಿತ್ತು.

ಕೃಷ್ಣಸುಂದರಿ ಕರಿಮೀನು ಮುನಿಯಮ್ಮ ಎತ್ತರದ ಹೆಂಗಸು. ಹಣೆ ತುಂಬಾ ರೂಪಾಯಿ ಬಿಲ್ಲೆ ಅಗಲದ ಮದ್ರಾಸ್ ರಕ್ತಗೆಂಪು ಕುಂಕುಮ. ಜೋತುಬಿದ್ದ ಬಿಳಿಕಲ್ಲು ಬೆಂಡೋಲೆ. ವಜ್ರದಂತೆ ಹೊಳೆಯುವ ಮುಖನತ್ತು. ತಮಿಳು ಪಿಂಕೋಸು ಶೈಲಿಯ ಸೀರೆಯುಟ್ಟು ಗತ್ತು ಗೈರತ್ತಿನಿಂದ ವ್ಯಾಪಾರ ನಡೆಸುತ್ತಿದ್ದ ಮಧ್ಯವಯಸ್ಕಳು. ಮುನಿಯಮ್ಮ ಅದ್ಯಾಕೋ ಅವತ್ತು ಸಪ್ಪೆ ಮುಖ ಹೊತ್ತು ಉಸ್ಸಪ್ಪಾ ಅಂತಾ ಹಟ್ಟೀಲಿ ಗಂಪ ಇಳಿಸಿದಳು. 'ರಾವೇ ಅಮ್ಮಾಯಾ' (ಬಾರೇ ಅಮ್ಮಯ್ಯಾ) ಎನ್ನುತ್ತಾ ಅಮ್ಮ ಬರಮಾಡಿಕೊಂಡಳು.

ಮುನಿಯಮ್ಮನ ತಮಿಳು ಸ್ಲಾಂಗ್‌ನ ತೆಲುಗು ಅರ್ಥವಾಗಬೇಕಾದರೆ ಕಿವಿಗೊಟ್ಟು ಕೇಳಬೇಕಿತ್ತು. ಇವರಿಬ್ಬರ ನಡುವಿನ ಮಾತುಕತೆಯಲ್ಲಿ ಕೆಜಿಎಫ್ ಗಣಿ ಮಾತು ಕಿವಿ ಮೇಲೆ ಬಿತ್ತು. ವಾರದ ಹಿಂದಷ್ಟೇ ಮುನಿಯಮ್ಮನ ತಂಗಿಯ ಗಂಡ ಗಣಿಯಲ್ಲಿ ಕೆಲಸ ಮಾಡುತ್ತಿದ್ದಾಗಲೇ ನಡೆದ ಅವಘಡದಲ್ಲಿ ಸತ್ತನಂತೆ. ಹತ್ತು ವರ್ಷದ ಹಿಂದೆ ಆಕೆಯ ಗಂಡನೂ ಹೀಂಗೆ ಗಣಿ ಮಣ್ಣಿನಲ್ಲೇ ಹೂತುಹೋದನಂತೆ. 'ನಮ್ಮ್ ಎಲ್ಲಾ ಪಂಸಗೂ ಈಪಡಿಯೇ ಸತ್ತಿಟಾಂಗೋ' (ನಮ್ಮ ಎಲ್ಲಾ ಹುಡುಗರು ಹೀಂಗೆ ಸತ್ತರು) ಎಂದು ಮರುಗಿದಳು.

ಇಬ್ಬರೂ ಇನ್ನೊಂದ್ಸಲ ಎಲೆಯಡಿಕೆ ನಮಲಿದರು. ಅಮ್ಮ ಮೊರದ ತುಂಬಾ ರಾಗಿ ಕೊಟ್ಟು ಸಿಗಡಿ ತಕ್ಕೊಂಡಳು.

ಗಣಿ ಎಂದರೆ ಏನು? ಆನೆ ಗಾತ್ರದ ಮರದ ದಿಮ್ಮಿಗಳನ್ನು ಹೆಂಗೆ ನಿಲ್ಲಿಸಿರುತ್ತಾರೆ? ಅವೆಲ್ಲ ಅಲುಗಾಡಿ ಬಿದ್ದು ಹೋಗುತ್ತವೆಯೇ? ಏನೇನೊ ಕಲ್ಪನೆ, ಚಡಪಡಿಕೆಯಿಂದ ಕಣ್ಣರೆಪ್ಪೆಗೆ ನಿದ್ದೆ ಹತ್ತಲಿಲ್ಲ.

ಶಾನುಭೋಗರ ಕೃಷ್ಣಮೂರ್ತಿ ಮಗ ಕೆಜಿಎಫ್‌ನಲ್ಲಿ ಕೆಲಸ ಮಾಡೋರು. ದಿನಾಲೂ ಟೇಕಲ್‌ನಲ್ಲಿ ಟ್ರೈನ್ ಹತ್ತೋರು. ಅವತ್ತು ಬೆಳ್ಳಂಬೆಳಗ್ಗೆ ಸೈಕಲ್ ತಡೆದಿದ್ದೆ. 'ಯಾಕೋ ಮರಿ ಸೈಕಲ್‌ಗೆ ಅಡ್ಡ ಬಂದೆ' ಅಂದರು. 'ಅಣ್ಣೋ, ನೀನ್ ಕೆಜಿಎಫ್‌ಕಾ ಕೆಲ್ಸ್‌ಕಾ ಹೋಗೋದು ಅಂದೆ'. 'ಹೌದು ಕಣೋ ಮರಿ, ಏನೋ ವಿಷಯ' ಅಂದರು. 'ಗಣಿಯಾಗಾ ಕೆಲ್ಸ್ ಮಾಡ್ತೀಯಾ ಅಂದೆ'. ನನ್ನ ಕೆಲಸ ಬಿಜಿಎಂಎಲ್ ಅಲ್ಲ; ಬೆಮಲ್ ಅಂದರು. ಏನೇನೂ ಅರ್ಥವಾಗಲಿಲ್ಲ.

ಹೀಗೆ, ಕೆಜಿಎಫ್ ಬಗ್ಗೆ ಮಾತು ಬಂದಾಗೆಲ್ಲಾ ಕಿವಿಗೊಡುತ್ತಿದ್ದೆ. ಟ್ಯೂಷನ್ ಕ್ಲಾಸ್ ಮಾಡುತ್ತಿದ್ದ ಭೀಮುನೆಯಪ್ಪನೋರ ಚಲಪತಿ ಅಣ್ಣ, ಕೆಜಿಎಫ್ ಬಗ್ಗೆ ಮತ್ತಷ್ಟು ಕುತೂಹಲ ಮೂಡಿಸಿದ್ದ. ಅವರು ಕೆಜಿಎಫ್ ಡಿಗ್ರಿ ಕಾಲೇಜಿನಲ್ಲಿ ಓದೋವಾಗ ತಮಿಳು, ಇಂಗ್ಲಿಷ್ ಮಾತಾಡೋ ಜನರು, ರಜನಿಕಾಂತ್ ಸಿನಿಮಾ ರಿಲೀಸ್ ದಿನದಂದು ಟಿಕೆಟ್ ಸಿಗದಿದ್ದರೆ ಕೈ ಕೊಯ್ದುಕೊಳ್ಳುತ್ತಿದ್ದ ಕಾಲೇಜು ಸಹಪಾಠಿಗಳ ಬಗ್ಗೆ ರಸವತ್ತಾಗಿ ವರ್ಣಿಸೋರು.

ಅದು 1998ರ ಮಾರ್ಚ್ ತಿಂಗಳು. ಎಸ್ಸೆಸ್ಸೆಲ್ಸಿ ಪರೀಕ್ಷೆ ಸಮಯ. ಸಮರೋಪಾದಿಯಲ್ಲಿ ಪರೀಕ್ಷೆ ಜಯಿಸಲು ಅಮ್ಮ ಒಂದು ಐಡಿಯಾ ಮಾಡಿದ್ದಳು. ಬಂಗಾರಪೇಟೆ–ಕೆಜಿಎಫ್ ಹತ್ತಿರ ಇರೋ ನೇರಳೆಕಟ್ಟೆಗೆ ಹೋಗಲು ತಯಾರಿ ನಡೆಸಿದ್ದಳು. ಜತೆಯಲ್ಲಿ ನಾನು ಬರಬೇಕೆಂದು ತಾಕೀತು ಮಾಡಿದಳು. ನನಗೆ ಸಿಕ್ಕಾಪಟ್ಟೆ ಬಾಯಿಪಾಠ ಮಾಡೋದಿದೆ, ಬರಲ್ಲ ಅಂದೆ. ಬಲವಂತ ಮಾಡಿ ಕರೆದೊಯ್ದಳು.

ಅಲ್ಲಿ ಮುನಿಶಾಮಿ ಅಜ್ಜನ ಭೇಟಿ ಪೂಜೆಗೆ ಮೊದಲೇ ನಿಕ್ಕಿ ಆಗಿತ್ತು. ಅಜ್ಜನ ಪವಾಡಗಳು ತಮಿಳುಸೀಮೆಯ ಕೃಷ್ಣಗಿರಿ, ವಾಪನಪಲ್ಲಿ, ನಾಚೀಕುಪ್ಪಂ, ಆಂಧ್ರದ ವಿ. ಕೋಟ, ಕುಪ್ಪಂನಿಂದ ಹಿಡಿದು ಕೆಜಿಎಫ್, ಬಂಗಾರಪೇಟೆ, ಮಾಲೂರು, ಹೊಸಕೋಟೆ, ಆನೇಕಲ್‌ವರೆಗೂ ಹಬ್ಬಿದ್ದವು. ಒಮ್ಮೊಮ್ಮೆ ಅವಧೂತನಂತೆಯೂ, ಒಮ್ಮೊಮ್ಮೆ ಮಂತ್ರವಾದಿಯಂತೆಯೂ ಅಜ್ಜ ಪ್ರಸಿದ್ಧ.

ಆ ದಿನ ಭಾನುವಾರ ನೇರಳೆಕಟ್ಟೆ ಹಾದು ಬ್ಯಾಟರಾಯಸ್ವಾಮಿ ಗುಡಿ ಕಡೆ ಇರೋ ಮುನಿಶಾಮಿ ಅಜ್ಜನ ತೋಟ ತಲುಪಿದಾಗ ಮಟ ಮಟ ಮಧ್ಯಾಹ್ನ. ಅನತಿ ದೂರದಲ್ಲಿ ಸೈನೈಡ್ ಗುಡ್ಡಗಳು ಬಿಸಿಲಿಗೆ ನಿಗಿನಿಗಿ ಮಿಂಚುತ್ತಿದ್ದವು. ತೋಟದ ನಡುವೆ ನಾಡಹೆಂಚಿನ ಮನೆ. ಸುತ್ತಲೂ ಕಣಗಿಲೆ ಹೂವಿನ ಗಿಡಗಳು. ಮನೆ ಮುಂದಿನ ಹೊಂಗೆ ಮರದಡಿ ಕುಳಿತಿದ್ದ ಅಜ್ಜ, ಮಾಸಲು ಬಿಳಿ ಬಣ್ಣದ ಕಚ್ಚೆ ಪಂಚೆ, ಜುಬ್ಬಾದ ರೀತಿಯ ಅಂಗಿ ಧರಿಸಿದ್ದ. ಪ್ರಸನ್ನವದನದಿಂದ ಸಂಜೆ ಪೂಜೆಗೆ ದೀಪದಾರತಿ ತಯಾರಿ ನಡೆಸಿದ್ದ. ನೋಡಿದ ಕೂಡಲೇ 'ರಾ ಬಿಡ್ಡಾ, ರಾ' (ಬಾರೋ ಮಗು ಬಾ) ಎಂದು ಬರಮಾಡಿಕೊಂಡ.

ಡ್ರಾವಿಡಿಯನ್ ಮೈಬಣ್ಣದ ಮುನಿಶಾಮಿ ಅಜ್ಜ ವಯಸ್ಸಿನಲ್ಲಿದ್ದಾಗ ಆಜಾನುಬಾಹು. ದೇಹಕ್ಕೂ ಮನಸ್ಸಿಗೂ ವಯಸ್ಸಾಗಿ ದೇಹ ಕೊಂಚ ಬಾಗಿತ್ತು. ಅಲ್ಲೇ ವರಾಂಡದಲ್ಲಿ ಅವರ ಹೆಂಡ್ತಿ ಚಿನ್ನಮ್ಮಾಯಿ, ರಾಗಿ ಮುದ್ದೆಗೆ ಹಿಟ್ಟೆಸರು ಕೊತ ಕೊತ ಕುದಿಸುತ್ತಾ ಒಲೆ ಮುಂದೆ ಪುಳ್ಳೆ ಮುರಿಯುತ್ತಿದ್ದಳು. ದೂರದಲ್ಲಿ ಗೂಟಕ್ಕೆ ಜಡಿದು ಕಟ್ಟಿದ ಒಂಟಿ ಕಣ್ಣಿನ ಎಮ್ಮೆಯೊಂದು ಅತ್ತಾ ಇತ್ತಾ ತಲೆಯಾಡಿಸುತ್ತಾ ಗೂರಾಡುತ್ತಿತ್ತು. ಏನೋ ಐಬಿನಿಂದಾಗಿ ಎಮ್ಮೆಗೆ ಒಂದು ಕಣ್ಣು ಹೋಗಿತ್ತು. ಉರಿಬಿಸಿಲಿಗೆ ಸುತ್ತಲಿನ ತೋಟಗಳು ಮುದುಡಿ ತೂಕಡಿಸುತ್ತಿದ್ದವು.

ಅಲ್ಲೇ ಹೊಂಗೆ ಮರದ ಬುಡಕ್ಕೆ ಜೋಡಿಸಿಟ್ಟಿದ ನಾಲ್ಕೈದು ದೊಡ್ಡ ಗಾತ್ರದ ಮಣ್ಣಿನ ಬೊಂಬೆಗಳಿಗೆ ಅಜ್ಜ ಗನ್ನೇರಿ ಹೂವು (ಕಣಗಿಲೆ) ಮುಡಿಸಿದ. ಅರಿಸಿನ–ಕುಂಕುಮ ಹಚ್ಚಿ ಎರಡೂ ಕೈಯಲ್ಲಿ ನಿಂಬೆ ಹಣ್ಣು ಹಿಡಿದವರೇ ತಮಿಳಿನಲ್ಲಿ ಏನೇನೋ ಪಿಸುಗುಡುತ್ತಾ ಸೈನೈಡ್ ಗುಡ್ಡದತ್ತ ಮುಖ ಮಾಡಿ ಗಾಳಿಯೊಂದಿಗೆ ಮಾತನಾಡಿದ. 'ಅಯ್ಯಾ ನಿಂಗಳ್ ಮೇಲೇ ವಾಂಗೋ' (ಪೂರ್ವಸೂರಿಗಳೇ ಮೇಲೇರಿ ಬನ್ನಿ) ಎನ್ನುತ್ತ, ಈ ಬಾಲಕನನ್ನು ಸಂತೈಸಿ ಪರೀಕ್ಷೆ ಎದುರಿಸಲು ಧೈರ್ಯ ತುಂಬುವಂತೆ ಪ್ರಾರ್ಥಿಸಿದ. ಗನ್ನೇರಿ ಹೂವು, ನಿಂಬೆಹಣ್ಣು ಮಂತ್ರಿಸಿ ಬೀಳ್ಕೊಟ್ಟ.

'ಪೂರ್ವಸೂರಿಗಳೇ ಮೇಲೇರಿ ಬನ್ನಿ' ಎನ್ನುವ ಅಜ್ಜನ ಮಾತಿನ ತಾತ್ಪರ್ಯ ವರ್ಷಗಳ ನಂತರ ಅರ್ಥವಾಯಿತು. ಅಜ್ಜನ ತಂದೆ, ಅವರ ಸೋದರ ಸಂಬಂಧಿಗಳೆಲ್ಲ ಆಳದ ಗಣಿಯಲ್ಲಿ ಕೆಲಸ ಮಾಡುತ್ತಾ ಮಾಡುತ್ತಾ ರಕ್ತಕಾರಿಕೊಂಡು ಮಣ್ಣಾದವರು. ಅಜ್ಜನೂ ಕೆಲ ವರ್ಷ ಗಣಿಯಲ್ಲಿ ಕೆಲಸ ಮಾಡಿದವನೇ. ಗಣಿ ಕೆಲಸದ ದಣಿವು ಸಾಕಾಗಿ, ಸೈನೈಡ್ ಗುಡ್ಡದ ಸಮೀಪದಲ್ಲೇ ಜಮೀನು ಖರೀದಿಸಿದ್ದ. ಬರಡು ಭೂಮಿಯನ್ನು ಕೃಷಿಯೋಗ್ಯ ಮಾಡಿಕೊಂಡಿದ್ದ. ಮಕ್ಕಳಿಲ್ಲದ ದಂಪತಿಗೆ ಕೃಷಿಯೇ ಆಧಾರ ದೈವ. ಪೂರ್ವಸೂರಿಗಳನ್ನು ಸ್ಮರಿಸುವುದನ್ನೇ ಜನರೆಲ್ಲ ಅಜ್ಜನ ಮೈಮೇಲೆ ದೇವರು ಬರುವ ಕಥೆ ಕಟ್ಟಿದ್ದರು. ಗಣಿ ಮಣ್ಣಿನಲ್ಲಿ ಮಣ್ಣಾದ ಅವರ ಪೂರ್ವಿಕರನ್ನು ಆಹ್ವಾನಿಸಿಕೊಂಡು ಜೀವನ ಜಂಜಾಟದಲ್ಲಿ ನೊಂದು ಧಾವಿಸಿ ಬರುವವರಿಗೆ ಸಾಂತ್ವನ ನುಡಿಯುತ್ತಿದ್ದ.

ಕೆಜಿಎಫ್ ಬಗ್ಗೆ ಅದೆಷ್ಟೋ ಬಿಡಿ ಅನುಭವಗಳು. ಈ ಮಣ್ಣಿನಲ್ಲಿ ಸಾವಿರಾರು 'ತಂಗಲಾನರು' ಹೂತು ಹೋಗಿದ್ದಾರೆ. ತುತ್ತಿನ ಚೀಲಕ್ಕಾಗಿ ದಿನಾಲೂ ಬೆಂಗಳೂರಿಗೆ ಬಂದು ರಟ್ಟೆ ಸವೆಸುವ ಸಾವಿರಾರು ಗಣಿ ಕಾರ್ಮಿಕರಿದ್ದಾರೆ. ನಿರುದ್ಯೋಗ, ವಸತಿ ಸಮಸ್ಯೆ ಸೈನೈಡ್ ಗುಡ್ಡದಂತೆ ಬೆಳೆದು ನಿಂತಿದೆ. 'ತಂಗಲಾನ್' ಸಿನಿಮಾ ರಕ್ತಬಸಿದು ಚಿನ್ನ ಬಗೆದುಕೊಟ್ಟ ಸಾವಿರಾರು ಪೂರ್ವಸೂರಿಗಳ ಸಂಕಥನ. ಪೂರ್ವದಲ್ಲಿ ಚಿನ್ನದ ಗಟ್ಟಿಗಳನ್ನು ಕಾಯಲು ಪ್ರಕೃತಿಯೇ ಕಾವಲಾಗಿದ್ದಳು. ಈಗ ಪಾಳು ಬಿದ್ದಿರುವ ಭೂಮಿ ಮೇಲೆ ರಿಯಲ್ ಎಸ್ಟೇಟ್ ಮಾಫಿಯಾ, ರಾಜಕಾರಣಿಗಳ ಕಣ್ಣು ಬಿದ್ದಿದೆ. ಕಾಯಲು ಯಾರಿದ್ದಾರೆ?

ಪ್ರತಿಕ್ರಿಯಿಸಿ: **feedback@sudha.co.in**